

ಸಂಗೀತ ಸ್ಮೃತಿಗಳ
ವಾಸುದೇವಾಚಾರ್ಯರ ಮನೆ

ಆಚಾರ್ಯರ ಪುಣ್ಯದ ಫಲವೋ ಏನೋ ಕೆಲವು ಸಂಗೀತಪ್ರಿಯರು ಮೈಸೂರು ನಗರದ ಚರಿತ್ರೆಗೆ ಸಂದ ಈ ಮನೆಯನ್ನು ಮತ್ತೆ ಸಂಗೀತದ ತಾಣವಾಗಿ ಮಾಡಲು ಪಣತೊಟ್ಟರು. ಈಗ ಈ ಮನೆಯ ಮಾಲಿಕರಾದ ವಾಸುದೇವಾಚಾರ್ಯರ ಮರಿಮಗ ಬೆಂಗಳೂರಿನಲ್ಲಿ ವಾಸವಾಗಿದ್ದು, ಅವರೂ ಈ ಮನೆಯ ಪುನರುಜ್ಜೀವನಕ್ಕೆ ಕೈಜೋಡಿಸಿದರು.

ಆಚಾರ್ಯರ ಮನೆಯ ಪುನರುಜ್ಜೀವನಕ್ಕೆ ಮುಂದಾದವರು ಸಿರಿವಂತರೇನಲ್ಲ. ಹೆಚ್ಚಿನವರು ಸಂಗೀತಗಾರರೇ. ಅವರುಗಳೇ ಶ್ರಮದಾನ ಮಾಡಿ ಮನೆಯ ಒಳಗೂ ಹೊರಗೂ ರಾಶಿಬಿದ್ದಿದ್ದ ಗಲೀಜನ್ನು ಹೊರಹಾಕಿದರು. ಬೆಳೆದ ಸೊಪ್ಪುಸದೆಯನ್ನು ಮುಳ್ಳುಕಂಟಿಗಳನ್ನೂ ಕಡಿದು ಮನೆಯ ಸುತ್ತಲ ಆವರಣ ಶುಚಿಗೊಳಿಸಿದರು. ಮುಖ್ಯವಾಗಿ ಇದು ಸಾರ್ವಜನಿಕ ಶೌಚತಾಣವಾಗುವುದನ್ನು ತಪ್ಪಿಸಲು ಹರಸಾಹಸ ಮಾಡಬೇಕಾಯ್ತು. ಜೊತೆಗೆ ರಾತ್ರಿ ಚಟುವಟಿಕೆಗಳನ್ನು ಬಂದ್ ಮಾಡುವುದು ದುಸ್ಸಾಹಸವಾಗಿತ್ತು. ನಗರದ ಎನ್.ಐ.ಇ. ಕಾಲೇಜಿನ ಪ್ರಾಧ್ಯಾಪಕ ಯದುಪತಿ ಪುಟ್ಟಿ ಹಾಗೂ ಅವರ ಗೆಳೆಯರು ಇದನ್ನು ಒಂದು ಯಜ್ಞದಂತೆ ಕೆಲಸಮಾಡಿದರು. ಹಳೆಯ ಕಟ್ಟಡಕ್ಕೆ ಸುಣ್ಣಬಣ್ಣ ಮಾಡಿಸಿ, ಒಡೆದ ಹಂಚುಗಳನ್ನು ಬದಲಾಯಿಸಿ, ಎಷ್ಟೋ ಕಾಲದಿಂದ ತೆಗೆಯದಿದ್ದ ಕಿಟಕಿ ಬಾಗಿಲುಗಳನ್ನು ತೆರೆದು, ಮಣ್ಣುನೆಲವನ್ನುಗುಡಿಸಿ, ಸಾರಿಸಿ ಕೂರಲು ಸಾಧ್ಯವಾಗುವ ಸ್ಥಿತಿಗೆ ತಂದರು.

ಕಳೆದ ಎರಡು ವರ್ಷಗಳಿಂದ ನೂರಾರು ಕಲಾವಿದರು ಭಾಗವಹಿಸಿದ, ಸುಮಾರು 40 ಸಂಗೀತ ಕಾರ್ಯಕ್ರಮಗಳು ಅಲ್ಲಿ ನಡೆದಿವೆ. ನೂರಾರು ಸಂಗೀತಗಾರರು ಆಚಾರ್ಯರ ಮೇಲಿನ ಪ್ರೀತಿಯಿಂದ ಅಲ್ಲಿ ಬಂದು ಹಾಡಿದ್ದಾರೆ. ಹಲವು ವಾದ್ಯಗಳ ಜುಗಲಬಂದಿ ನಡೆದಿದೆ. ಕಾರ್ತೀಕ ಮಾಸದಲ್ಲಿ ಆಚಾರ್ಯರ ಮನೆಯಲ್ಲಿ ಅವರ ಅಭಿಮಾನಿಗಳು ದೀಪ ಬೆಳಗಿ, ಪಟಾಕಿ ಸಿಡಿಸಿ, ಖುಷಿಪಟ್ಟಿದ್ದಾರೆ. ಎಷ್ಟೋ ವರ್ಷಗಳಿಂದ ನಡೆಯದ ಅನ್ನದಾನ ಅಂದು ನಡೆದಿದೆ. ಹೀಗೆ ಬೀಳುವ ಹಂತದಲ್ಲಿದ್ದ ಚಾರಿತ್ರಿಕ ಮನೆಯೊಂದು ಸಂಗೀತ ಪ್ರಿಯರ ಎಚ್ಚರಿಕೆಯಿಂದ ಮರುಜೀವ ಪಡೆದಿದೆ.

ನಿಜ. ಇಂದಿಗೂ ಈ ಮನೆಗೆ ವಿದ್ಯುತ್ ಸಂಪರ್ಕವಿಲ್ಲ, ನೀರು ಬರುತ್ತಿಲ್ಲ. ಅವೆಲ್ಲ ನಿಂತು ಅದೆಷ್ಟೋ ವರ್ಷಗಳಾಗಿವೆ. ಈ ಸ್ಥಿತಿಯಲ್ಲೂ ಕಲಾವಿದರು ಬಂದು, 'ಇದು ಆಚಾರ್ಯರಿಗೆ ತಾವು ಸಲ್ಲಿಸುವ ಸೇವೆ'ಯೆನ್ನುವ ರೀತಿಯಲ್ಲಿ ವಾಸುದೇವಾಚಾರ್ಯರ ಮನೆಗೆ ಬಂದು ಕಛೇರಿ ನಡೆಸಿಕೊಡುತ್ತಾರೆ. ಕಳೆದ ಎರಡು ವರ್ಷಗಳಿಂದ ಇಂಥ ಸೇವೆ ವಾರವಾರವೂ ನಡೆಯುತ್ತಿದೆ. ಇತ್ತೀಚೆಗೆ ಸಂಸ್ಕೃತ ಪ್ರಾಧ್ಯಾಪಕ ಪ್ರೊ. ಟಿ.ಎನ್. ಪ್ರಭಾಕರ ಅವರು ತಮ್ಮ ತಂದೆಯ ನೆನಪಿಗೆ ಈ ಮನೆಯಲ್ಲಿ 'ಸಂಸ್ಕೃತ ಅಂತ್ಯಾಕ್ಷರಿ'ಯೆಂಬ ವಿಶೇಷ ಕಾರ್ಯಕ್ರಮ ನಡೆಸಿಕೊಟ್ಟರು. ಅಗಾಧ ಸಂಸ್ಕೃತ ಪಂಡಿತರಾಗಿದ್ದ ವಾಸುದೇವಾಚಾರ್ಯರಿಗೆ ಇದು ಅವರ ಅಭಿಮಾನಿಗಳು ನೀಡಿದ ಗೌರವದಂತಿತ್ತು. ಇಂದಿಗೂ ಪಾಳು ಗುಡಿಯಂತಿರುವ ಈ ಮನೆಯಲ್ಲಿ ಕಲಾವಿದರ ಗಡಣವೇ ಬಂದು ಕಾರ್ಯಕ್ರಮ ನೀಡುತ್ತಿರುವುದು ವಾಸುದೇವಾಚಾರ್ಯರ ಮನೆ ಮತ್ತೆ ಸಂಸ್ಕೃತಕ್ಕೂ ಸಂಸ್ಕೃತಿಗೂ ವೇದಿಕೆಯಾಗಿದೆ.

ಒಂದು ಕಾಲದಲ್ಲಿ ಜನಗಳೇ ಮುಂದೆ ಬಂದು ತಮ್ಮ ನಗರಕ್ಕೆ ಕೀರ್ತಿತರುವ ವಾಗ್ಗೇಯಕಾರರಿಗೆ ಮನೆಕಟ್ಟಿಸಿಕೊಟ್ಟಿದ್ದರಂತೆ. ಈಗಲೂ ಕಲಾವಿದರೇ ಮುಂದೆ ಬಂದು ಆಚಾರ್ಯರ ಮನೆಯನ್ನು ಸಂಗೀತ ಚಟುವಟಿಕೆಯ ತಾಣವಾಗಿ ಉಳಿಸುತ್ತಿರುವುದು ಅಭಿನಂದನೀಯ.

ಪ್ರತಿಕ್ರಿಯಿಸಿ: feedback@sudha.co.in